# <u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ವಿಶೇಷ ನ್ಯಾಯಾಧೀಶರ ನ್ಯಾಯಾಲಯ, ಹಾವೇರಿ.</u>

## <u>ಪ್ರಕರಣ ಸಂಖ್ಯೆ: ಸ್ಪೆಷಲ್ ಎಸ್.ವಿ.ಸಿ.6/2019</u>

ಅ.ಸಾ : 2
ದೋಸಾ : 2

ದಿನಾಂಕ:**05/07/2024** ರಂದು ಸಾಕ್ಷಿ ಅಸಾ-**2** ರವರನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

**<u>ಪಾಟೀ ಸವಾಲುಃ ಆರೋಪಿ ಪರಃ ಶ್ರೀ ಎಂ.ಸಿ.ಎಚ್. ವಕೀಲರಿಂದಃ-</u>**

13. ಕೃತ್ಯ ಜಾಗೆ ಸಾಕಷ್ಟು ಜನದಟ್ಟಣೆ ಇರುವಂತಹ ಜಾಗೆ ಎಂದರೆ ನಿಜ. ನಾನು ಲೋಕಾಯುಕ್ತ ಪೊಲೀಸ ಠಾಣೆಗೆ ಮಧ್ಯಾಹ್ನ 1-00 ಘಂಟೆಗೆ ಹೋಗಿದ್ದೆ. ಡಿವೈಎಸ್ಪಿ, ಚಾಸಾ-1 ಮತ್ತು ಅವರ ತಾಯಿ ಅಲ್ಲಿ ಇದ್ದರು. ನಾವು ಹೋದ ಮೇಲೆ ಟ್ರ್ಯಾಪಗೆ ಹೋಗುವಂತಹ ವಸ್ತುಗಳನ್ನು ತಯಾರಿ ಮಾಡಿ ಇಟ್ಟುಕೊಂಡರು. ನಮ್ಮ ಕೈಯಲ್ಲಿ ನೋಟುಗಳನ್ನು ಕೊಟ್ಟು ಜೇಬಿನಲ್ಲಿ ಇಟ್ಟ ಮೇಲೆ ಕೈತೊಳೆಯಲು ಹೇಳಿದರು.

14. ಯಾವ ಕಛೇರಿಯ ವ್ಯಕ್ತಿಯ ಮೇಲೆ ಟ್ರ್ಯಾಪ್ ಮಾಡುವುದು ಅಂತಾ ನಮಗೆ ತಿಳಿಸದೇ ಗೌಪ್ಯವಾಗಿ ಇಟ್ಟಿದ್ದರು ಎಂದು ಸೂಚಿಸುವುದು ನಿಜ. ನಾನು ದೂರುದಾರನ ಜೊತೆ ಕಛೇರಿಗೆ ಹೋದಾಗ ಆರೋಪಿ ಕಛೇರಿಯಲ್ಲಿರಲಿಲ್ಲ ಎಂದರೆ ನಿಜ. ನಾನು ಮತ್ತು ದೂರುದಾರ ಆರೋಪಿ ಬರುವಿಕೆಯನ್ನು ಕಛೇರಿಯಿಂದ ದೂರದಲ್ಲಿ ನಿಂತು ಕಾಯುತ್ತಿದ್ದೆವು ಎಂದರೆ ನಿಜ.

15. ಆರೋಪಿ ಕಛೇರಿಗೆ ಬಂದ ಮೇಲೆ ಪಿರ್ಯಾದಿದಾರ ಕಛೇರಿ ಒಳಗೆ ಹೋದ. ನಾನು ಹೊರಗಿನಿಂದ 200 ಮೀಟರ ಅಂತರದಿಂದ ಗಮನಿಸುತ್ತಿದ್ದೆ. ನಾನು ಚಾಸಾ-1 ಕೊಡುವ ಸೂಚನೆಗೆ ಕಾಯುತ್ತಿದ್ದೆ ಎಂದರೆ ನಿಜ. ಆರೋಪಿ ಮತ್ತು ಚಾಸಾ-1 ರವರ ನಡುವೆ ಕಛೇರಿಯ ಒಳಗಡೆ ಏನು ಮಾತುಕತೆ ಆಯಿತು ನನಗೆ ಗೊತ್ತಿಲ್ಲ.

16. ಆರೋಪಿ ಮತ್ತು ಚಾಸಾ-1 ರವರ ನಡುವೆ ಇರುವ ಧ್ವನಿ ಸಂಭಾಷಣೆಯನ್ನು ಎಸಿಬಿ ಕಛೇರಿಯಲ್ಲಿ ಕೇಳಿಸಿರುತ್ತಾರೆ. ಆರೋಪಿ ಮತ್ತು ಚಾಸಾ-1 ರವರ ನಡುವೆ ಇರುವ ಧ್ವನಿ ಸಂಭಾಷಣೆ

ಯನ್ನು ಎಸಿಬಿ ಕಛೇರಿಯಲ್ಲಿ ಕೇಳಿಸಿರುತ್ತಾರೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-1 ಸೂಚನೆ ಕೊಟ್ಟ, 10 ಹೆಜ್ಜೆ ಹಿಂದಿನಿಂದ ಆರೋಪಿ ಕೂಡ ಕಛೇರಿಯಿಂದ ಹೊರಗೆ ಬಂದ.

17. ಎಸಿಬಿ ಪೊಲೀಸರು ಆರೋಪಿಯನ್ನು ಕಛೇರಿಯ ಒಳಗಡೆ ಹೋಗಿ ಕುರ್ಚಿಯ ಮೇಲೆ ಕೂರಿಸಿದರು ಎಂದು ಸೂಚಿಸುವುದು ಸರಿಯಲ್ಲ. ಆರೋಪಿಯ ಕಛೇರಿಯ ಒಳಗಡೆ 3-4 ಟೇಬಲ್ ಮತ್ತು 4-5 ಕುರ್ಚಿಗಳಿದ್ದವು. ಆರೋಪಿ ಹೋಗಿ ಒಂದು ಕುರ್ಚಿ ಮೇಲೆ ಕುಳಿತ, ಅದು ಯಾವ ಕುರ್ಚಿ ಅಂತಾ ಹೇಳಲಾಗುವುದಿಲ್ಲ.

18. ಆ ವೇಳೆಗೆ ಆರೋಪಿಗೆ ಎಸಿಬಿ ಪೊಲೀಸರು ಎಸಿಬಿ ಕಛೇರಿಯಿಂದ ಬಂದಿದ್ದೇವೆ ಅಂತಾ ಹೇಳಿದರು. ಎಸಿಬಿ ಪೊಲೀಸರು ಚಾಸಾ-1 ಆರೋಪಿಗೆ ಹಣ ಕೊಟ್ಟಿದ್ದಾನೆಂತಾ ಕೇಳಿದರು, ಅದಕ್ಕೆ ಆರೋಪಿ ಹಣ ತೆಗೆದುಕೊಂಡಿಲ್ಲ ಅಂತಾ ಹೇಳಿದ. ಆಗ ದೂರುದಾರ ತನ್ನ ಜೇಬಿನಲ್ಲಿದ್ದ ಹಣವನ್ನು ತೆಗೆದು ಟೇಬಲ್ ಮೇಲಿಟ್ಟ ಎಂದು ಸೂಚಿಸುವುದು ಸರಿಯಲ್ಲ.

19. ಎಸಿಬಿ ಪೊಲೀಸರು ಟೇಬಲ್ ಮೇಲಿದ್ದ ಹಣವನ್ನು ಆರೋಪಿ ಕೈಗೆ ಕೊಟ್ಟರು ಎಂದು ಸೂಚಿಸುವುದು ಸರಿಯಲ್ಲ. ಚಾಸಾ-1 ಪೊಲೀಸರಿಗೆ ಹಣವನ್ನು ಕೊಟ್ಟರು. ಮರುದಿವಸ ನಾನು ಎಸಿಬಿ ಕಛೇರಿಗೆ ಹೋಗಿದ್ದೆ. ನನ್ನ ಸಹಿಯನ್ನು ತುಂಬಿರುವ ದಾಖಲೆಗಳ ಮೇಲೆ ಪಡೆದಿರುತ್ತಾರೆ ಎಂದು ಸೂಚಿಸುವುದು ಸರಿಯಲ್ಲ.

20. ವಹಿಸುವಿಕೆ ಪಂಚನಾಮೆಯಲ್ಲಿ ಎನು ವಿಷಯ ಬರೆದಿದೆ ಅಂತಾ ನನಗೆ ಗೊತ್ತಿಲ್ಲ ಎಂದು ಸೂಚಿಸುವುದು ಸರಿಯಲ್ಲ. ನನ್ನ ಸಮಕ್ಷಮ ನಿಪಿ-2, ನಿಪಿ-3 ಪಂಚನಾಮೆಗಳನ್ನು ಮಾಡಿದ್ದಾರೆಂತಾ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಎಸಿಬಿ ಪೊಲೀಸರಿಗೆ ಸಹಾಯ ಮಾಡುವ ಉದ್ದೇಶದಿಂದ ಪಂಚನಾಮೆಗಳನ್ನು ಮಾಡಿದರು ಅಂತಾ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮತ್ತು ವಿಶೇಷ ನ್ಯಾಯಾಧೀಶರು, ಹಾವೇರಿ.